ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆ:ಎ3/ಭೂಮಿ/ಬಿ.ಮಿನಿ.ಹೈ.ಪ್ರೋ/ಸಿಆರ್-43/2018-19 ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ,
ಮಡಿಕೇರಿ ವಿಭಾಗ, ಮಡಿಕೇರಿ,
ದಿನಾಂಕ: 05-12-2018.

ಇವರಿಗೆ,

ಮೆ॥ ಕೊಡಗು ಹೈಡೆಲ್ ಪ್ರೋಜೆಕ್ಟ್ಸ್ ಪ್ರೈ. ಲಿ.,
ಎಸ್-5, 2ನೇ ಹಂತ, ರೆಡ್ ಕ್ರಾಸ್ ಭವನ್
ನಂ. 26, ರೇಸ್ ಕೋರ್ಸ್ ರಸ್ತೆ,
ಬೆಂಗಳೂರು – 560 001.

**ವಿಷಯ** : ಮೆ॥ ಕೊಡಗು ಹೈಡೆಲ್ ಪ್ರೋಜೆಕ್ಟ್ಸ್ ಪ್ರೈವೆಟ್ ಲಿಮಿಟೆಡ್ ಕಂಪನಿಯವರಿಗೆ ಪೈಸಾರಿ ಜಾಗದ ಸ.ನಂ. 1/9ಪಿ2 ರ 0.994 ಹೆ. ಅರಣ್ಯ ಪ್ರದೇಶವನ್ನು ಬೀದಳ್ಳಿ ಮಿನಿ ಹೈಡೆಲ್ ಪ್ರೋಜೆಕ್ಟ್ 03 ಮೆಗಾವ್ಯಾಟ್ ಸ್ಥಾಪಿಸಲು ಅನುಮತಿ ನೀಡಿರುವ ಬಗ್ಗೆ ಸದರಿಯವರಿಂದ ನೆಟ್ ಪ್ರೆಸೆಂಟ್ ವ್ಯಾಲ್ಯೂ (NPV) ಮೊತ್ತವನ್ನು ಪಾವತಿಸಲು ನೋಟೀಸ್ ನೀಡುವ ಬಗ್ಗೆ.

**ಉಲ್ಲೇಖ**
1. Ministry of Environment, Forests & Climate Change Reginal Office (Southern Zone) Kendriya Sadan, IVth Floor, E & F Wings, 17th main Road, IInd Block, Koramangala, Banglore – 560 034 Letter No: F.No. 4-KRB1148/2018-19-BAN/510 Dated 13th July. 2018.
2. ತಮ್ಮ ಮನವಿ ಅರ್ಜಿ ದಿನಾಂಕ: 04-12-2018.
3. ವಲಯ ಅರಣ್ಯಾಧಿಕಾರಿ, ಸೋಮವಾರಪೇಟೆ ವಲಯ, ಸೋಮವಾರಪೇಟೆ ಇವರ ಕಚೇರಿ ಪತ್ರ ಸಂಖ್ಯೆ: ವಅಅ/ ಸೋಮ/ವಿವ-162/ಹೆ.ಪ್ರೋ/2ಸ018-19 ದಿ: 01-12-2018.

********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಪತ್ರದಲ್ಲಿ Ministry of Environment, Forests & Climate Change Reginal Office (Southern Zone) Kendriya Sadan, IVth Floor, E & F Wings, 17th Main Road, IInd Block, Koramangala, Banglore – 560 034 ರವರ ಪತ್ರ ಸಂಖ್ಯೆ F.No. 4-KRB1148/2018-19-BAN/510 Dated 13th July. 2018 ರ ಆದೇಶದ ಪ್ರಕಾರ 11 ಷರತ್ತುಗಳನ್ನು ವಿಧಿಸಿ ನಿಮ್ಮ ಸಂಸ್ಥೆಗೆ ಕುಮಾರಳ್ಳಿ ಗ್ರಾಮದ ಪೈಸಾರಿ ಜಾಗದ ಸ.ನಂ. 1/9ಪಿ2 ರ 0.994 ಹೆ. ಅರಣ್ಯ ಪ್ರದೇಶವನ್ನು ಬೀದಳ್ಳಿ ಮಿನಿ ಹೈಡೆಲ್ ಪ್ರೋಜೆಕ್ಟ್ 03 ಮೆಗಾವ್ಯಾಟ್ ಸ್ಥಾಪಿಸಲು ಅನುಮತಿಯನ್ನು ನೀಡಿರುತ್ತಾರೆ.

ಸದರಿ ಉಲ್ಲೇಖ(1)ರ ಪತ್ರದಲ್ಲಿ ಸದರಿ ಕುಮಾರಳ್ಳಿ ಗ್ರಾಮದ ಸ.ನಂ. 1/9ಪಿ2 ರ 0.994 ಹೆ. ಅರಣ್ಯ ಪ್ರದೇಶದಲ್ಲಿ ಬೀದಳ್ಳಿ ಮಿನಿ ಹೈಡೆಲ್ ಪ್ರೋಜೆಕ್ಟ್ 03 ಮೆಗಾವ್ಯಾಟ್ ಸ್ಥಾಪಿಸಲು ನೀಡಿರುವ ಬಗ್ಗೆ ನಿಮ್ಮಿಂದ ನೆಟ್ ಪ್ರೆಸೆಂಟ್ ವ್ಯಾಲ್ಯೂ (NPV) ಮೊತ್ತವನ್ನು ಪಾವತಿಸಲು ನೋಟೀಸ್ ನೀಡುವ ಬಗ್ಗೆ ಮಾನ್ಯ

ಉಚ್ಚ ನ್ಯಾಯಾಲಯದ ಆದೇಶ ದಿನಾಂಕ: 28-3-2008 ಮತ್ತು 09-05-2008 ರಲ್ಲಿ **IA No. 826** ರ 566 ಕ್ಕೆ ಸಂಬಂಧಪಟ್ಟಂತೆ W.P . ಸಂಖ್ಯೆ: **202/1995**ರ ಪ್ರಕಾರ ಇಕೋ ವ್ಯಾಲ್ಯೂ ಕ್ಲಾಸ್ ಡೆನ್ಸ್ ಫಾರೆಸ್ಟ್ ಅರಣ್ಯ ಪ್ರದೇಶಕ್ಕೆ ಹೆಕ್ಟೇರ್ ಒಂದಕ್ಕೆ **ರೂ. 9,39,000.00** ನೆಟ್ ಪ್ರೆಸೆಂಟ್ ವ್ಯಾಲ್ಯೂ (NPV) ಮೊತ್ತವನ್ನು ಪಾವತಿಸುವಂತೆ ಆದೇಶವಿರುತ್ತದೆ.

ಮುಂದುವರೆದು, ನೀವು 03 ಮೆಗವ್ಯಾಟ್ ಬೀದಳ್ಳಿ ಮಿನಿ ಹೈಡೆಲ್ ಪ್ರೋಜೆಕ್ಟ್ ಸ್ಥಾಪಿಸಲು ಕೋರಿರುವ ಜಾಗವು ಇಕೋ ವ್ಯಾಲ್ಯೂ ಕ್ಲಾಸ್ ಡೆನ್ಸ್ ಫಾರೆಸ್ಟ್ (Semi Evergreen) ಅರಣ್ಯ ಪ್ರದೇಶಕ್ಕೆ ಒಳಪಡುವುದಾಗಿ ಉಲ್ಲೇಖ(3)ರಲ್ಲಿ ವಲಯ ಅರಣ್ಯಾಧಿಕಾರಿ, ಸೋಮವಾರಪೇಟೆ ವಲಯ, ಸೋಮವಾರಪೇಟೆರವರು ವರದಿ ಸಲ್ಲಿಸಿರುತ್ತಾರೆ.

ಆದ್ದರಿಂದ ನೀವು ಈ ಕೂಡಲೇ ಕುಮಾರಳ್ಳಿ ಗ್ರಾಮದ ಪೈಸಾರಿ ಜಾಗದ ಸ.ನಂ. 1/9ಪಿ2 ರ 0.994 ಹೆ. ಅರಣ್ಯ ಪ್ರದೇಶದಲ್ಲಿ 03 ಮೆಗಾವ್ಯಾಟ್ ಬೀದಳ್ಳಿ ಮಿನಿ ಹೈಡೆಲ್ ಪ್ರೋಜೆಕ್ಟ್ ಸ್ಥಾಪಿಸಲು ತಗಲುವ ವೆಚ್ಚ ನೆಟ್ ಪ್ರೆಸೆಂಟ್ ವ್ಯಾಲ್ಯೂ (NPV) ಮೊತ್ತ ರೂ. 9,33,366.00 ನ್ನು ಉಲ್ಲೇಖ(1)ರ ಪತ್ರದಲ್ಲಿ ಸರ್ಕಾರದ ಆದೇಶದಲ್ಲಿ ಸೂಚಿಸಿರುವ ಷರತ್ತು ಕ್ರ.ಸಂ. (5) ರನ್ವಯ ಆನ್‌ಲೈನ್ (Online) ಮುಖಾಂತರ ಪಾವತಿಸುವಂತೆ ಈ ಮೂಲಕ ಕೋರಿದೆ.

ಮಿಕ್ಕುಳಿದ ಷರತ್ತುಗಳನ್ನು ಉಲ್ಲೇಖ(1)ರ ಸರ್ಕಾರದ ಆದೇಶದ ಪ್ರಕಾರ ಪಾಲಿಸುವುದು.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಸಹಿ/-

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಡಿಕೇರಿ ವಿಭಾಗ, ಮಡಿಕೇರಿ

<u>ಪ್ರತಿಯನ್ನು ಗೌರವಗಳೊಂದಿಗೆ:-</u>

1. ಮಾನ್ಯ ಮುಖ್ಯ ಕಾರ್ಯದರ್ಶಿಗಳು ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ|| ಅಂಬೇಡ್ಕರ್ ವೀದಿ, ಬೆಂಗಳೂರು – 560 001.
2. ಮಾನ್ಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಅರಣ್ಯ ಭವನ, ಮಲ್ಲೇಶ್ವರಂ 18ನೇ ಅಡ್ಡರಸ್ತೆ ಬೆಂಗಳೂರು ಇವರಿಗೆ ಮಾಹಿತಿಗಾಗಿ
3. ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಡಗು ವೃತ್ತ, ಮಡಿಕೇರಿ ಇವರಿಗೆ ಮಾಹಿತಿಗಾಗಿ

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಡಿಕೇರಿ ವಿಭಾಗ, ಮಡಿಕೇರಿ